# ನಮ್ಮ ಮನಸೆಳೆಯುವ ನೆರೆರಾಷ್ಟ್ರ–ಚೀನಾ

ಇಂಗ್ಲೀಷ್‌ನಲ್ಲಿ 'ಲವ್ ದೈ ನೇಬರ್' (ನೆರೆಹೊರೆಯವರನ್ನು ಪ್ರೀತಿಸು) ಎನ್ನುವ ನುಡಿಯಿದೆ. ಆದರೆ ಇದು ಹೇಳುವುದಕ್ಕೆ ಬಹಳ ಸುಲಭವಾದರೂ ನಡೆಯಲ್ಲಿ ಹಾಗಿರುವುದು ಕಷ್ಟ. ಅದರಲ್ಲೂ ನಿಗೂಢತೆಯೇ ಮೈತಾಳಿದಂತಿರುವ ಮಹಾಗೋಡೆಯ ಒಳಗಿನ ನೆರೆರಾಷ್ಟ್ರದ ವಿಷಯಕ್ಕೆ ಬಂದಾಗ ಶಾಂತಿಪ್ರಿಯ ಭಾರತವೂ ಕೂಡ ಹೆಜ್ಜೆ ತಪ್ಪುತ್ತದೆ. ಆದರೆ ಜಾಗತೀಕರಣ ಎನ್ನುವುದು ಹೊಸ ಕ್ಷಿತಿಜಗಳ ಜಗತ್ತನ್ನು ನಮಗಾಗಿ ತೆರೆದಿಟ್ಟಿದೆ ಮತ್ತು ನಾವು ನಮ್ಮ ಆಕರ್ಷಣೀಯ ನೆರೆರಾಷ್ಟ್ರ ಚೀನಾದ ನಿಖರವಾದ ನೋಟವನ್ನು ಪಡೆಯಬಹುದು. ಚೀನಾಕ್ಕೆ ಭಾರತವೊಂದೇ ನೆರೆರಾಷ್ಟ್ರವಲ್ಲ. ಅಫಘಾನಿಸ್ಥಾನದಿಂದ ಜಪಾನ್‌ವರೆಗೆ 9.6 ಮಿಲಿಯನ್ ಚದರ ಕಿಲೋಮೀಟರ್‌ಗಳಷ್ಟು ವಿಸ್ತಾರವಾಗಿರುವ ಚೀನಾವು ಅನೇಕ ದೇಶಗಳ ಜೊತೆಯಲ್ಲಿ ಗಡಿಯನ್ನು ಹಂಚಿಕೊಳ್ಳುತ್ತದೆ ಮತ್ತು ಅಲ್ಲದೇ ವಿಸ್ತೀರ್ಣದಲ್ಲಿ ಚೀನಾವು ಮೂರನೇ ಅತಿದೊಡ್ಡ ದೇಶವಾಗಿರುತ್ತದೆ. ಜನಸಂಖ್ಯೆಯ ವಿಷಯಕ್ಕೆ ಬಂದರೆ ಯಾರೂ ಕೂಡ ಚೀನಾದೊಂದಿಗೆ ಸ್ಪರ್ಧಿಸಲಾಗದು. ಚೀನಾ ಜಗತ್ತಿನ ಅತಿಹೆಚ್ಚು ಜನಸಂಖ್ಯೆ ಹೊಂದಿರುವ ರಾಷ್ಟ್ರವಾಗಿದ್ದು 130 ಕೋಟಿಗಳಷ್ಟು ಜನರನ್ನು ಹೊಂದಿದೆ. ಇತ್ತೀಚಿನ ವರ್ಷಗಳಲ್ಲಿ ಚೀನಾವು ಕೈಗಾರಿಕಾ ವಸ್ತುಗಳ ಉತ್ಪಾದನೆಯಲ್ಲಿ ಪ್ರಮುಖ ದೇಶವಾಗಿ ಹೊರಹೊಮ್ಮಿರುತ್ತದೆ. ವಿಶ್ವದ 60% ಬೈಸಿಕಲ್ಲುಗಳು ಚೀನಾದಲ್ಲಿ ತಯಾರಾಗುತ್ತವೆಯೆಂದರೆ ಈ ದೇಶ ಎಷ್ಟು ಪ್ರಗತಿ ಸಾಧಿಸಿದೆ ಎನ್ನುವುದಕ್ಕೆ ಒಂದು ಉದಾಹರಣೆಯೆನ್ನಬಹುದು.

ಚೀನಾವು ಸಾವಿರಕ್ಕೂ ಅಧಿಕ ವರ್ಷಗಳ ಅದ್ಭುತವಾದ ಇತಿಹಾಸವನ್ನು ಹೊಂದಿದೆ. ಅವರ ಇತಿಹಾಸವು ಅನೇಕ ಹಂತಗಳ ಪ್ರಗತಿಯನ್ನು ಕಂಡಿರುತ್ತದೆ. ಚೀನಾವು ಕ್ರಿ.ಶ.105ರಲ್ಲಿಯೇ ಕಾಗದವನ್ನು ಸಂಶೋಧಿಸಿದ ದೇಶ. ಅವರು ಕಾಗದ ಉತ್ಪಾದನೆಯ ಪ್ರಕ್ರಿಯೆಯನ್ನು ಎಷ್ಟು ನಿಗೂಢವಾಗಿ ಉಳಿಸಿಕೊಂಡಿದ್ದರೆಂದರೆ ಈ ಸಂಶೋಧನೆಯು ಯುರೋಪ್ ಅನ್ನು ತಲುಪುವುದಕ್ಕೆ 700 ವರ್ಷಗಳಷ್ಟು ಕಾಲ ಬೇಕಾಯಿತು. ಕಾಗದದ ಜೊತೆಗೆ ಚೀನಾವು ಅನೇಕ ಸಂಶೋಧನೆಗಳ ಉಗಮಸ್ಥಾನವಾಗಿದ್ದು ಅವುಗಳಲ್ಲಿ ಮುದ್ರಣ, ಸಿಡಿಮದ್ದು, ರೇಷ್ಮೆ, ಪೋರ್ಸೆಲೈನ್, ತ್ರಿಜ್ಯ ಇತ್ಯಾದಿಗಳು ಸೇರಿವೆ. ಆದರೆ ಪ್ರಾಚೀನ ಕಾಲದಲ್ಲಿ ಚೀನಾದಲ್ಲಿ ಅನೇಕ ರಾಜ್ಯಗಳು ಅಸ್ತಿತ್ವದಲ್ಲಿ ಇದ್ದವು. ಇಲ್ಲಿನ ರಾಜವಂಶಗಳು ತಮ್ಮ ರಾಜ್ಯದ ಸುತ್ತ ಮಣ್ಣು ಅಥವಾ ಮರದ ಗೋಡೆಗಳನ್ನು ರೂಪಿಸಿ ಅನೇಕ ದಾಳಿಕೋರ ಬುಡಕಟ್ಟುಗಳ ದಾಳಿಯಿಂದ ತಮ್ಮ ದೇಶವನ್ನು ರಕ್ಷಿಸಿಕೊಳ್ಳುತ್ತಿದ್ದವು. ನಂತರ ಕಿನ್ ರಾಜಮನೆತನದ ಚಕ್ರವರ್ತಿ ಕಿನ್ ಷಿ ಹುವಾಂಗ್ ಇಂತಹ ಗೋಡೆಗಳ ಬದಲಾಗಿ ಮಹಾಗೋಡೆ ಎಂದು ಕರೆಯುವ ದೊಡ್ಡದಾದ, ಸಮಗ್ರವಾದ ಗೋಡೆಯನ್ನು ರೂಪಿಸಿದ. ಇದನ್ನು ಕಟ್ಟಲು 10 ವರ್ಷಗಳು ಬೇಕಾದವು. ಈ ಗೋಡೆಯು 500 ಕಿಲೋಮೀಟರ್‌ಗಳಷ್ಟು ಉದ್ದವಿದೆ. ಮಹಾಗೋಡೆಯನ್ನು ಪದೇ ಪದೇ ಪುನಃ ಕಟ್ಟಲಾಗಿದೆ, ನಿರ್ವಹಿಸಲಾಗಿದೆ ಮತ್ತು ಹೆಚ್ಚಿಸಲಾಗಿದೆ. ಸದ್ಯ ಇರುವ ಗೋಡೆಯ ಹೆಚ್ಚಿನ ಭಾಗವನ್ನು ಮಿಂಗ್ ರಾಜವಂಶದ ಆಳ್ವಿಕೆಯಲ್ಲಿ ಕಟ್ಟಲಾಗಿರುತ್ತದೆ (1368–1644).

ಚೀನಾದ ಮಹಾಗೋಡೆಯ ಜೊತೆಯಲ್ಲಿ ಇನ್ನೂ 29 ಸ್ಥಳಗಳನ್ನು ಯುನೆಸ್ಕೋವು ವಿಶ್ವ ಪರಂಪರೆಯ ತಾಣಗಳು ಎಂದು ಘೋಷಿಸಿರುತ್ತದೆ. ಇವುಗಳಲ್ಲಿ ಫಾರ್ಬಿಡನ್ ಸಿಟಿ ಕೂಡ ಒಂದು. ಈ ಆಕರ್ಷಣೀಯ ಚೀನಾ ರಾಜವಂಶದ ಅರಮನೆಯ ಸಂಕೀರ್ಣವು ಬೀಜಿಂಗ್‌ನ ಹೃದಯ ಭಾಗದಲ್ಲಿಯೇ ಇದೆ. ಈ ಸಂಕೀರ್ಣವು ಸುಮಾರು 800 ಕಟ್ಟಡಗಳನ್ನು ಹೊಂದಿದ್ದು, 78,00,000 ಚದರಡಿಯಷ್ಟು ವಿಸ್ತಾರವಾಗಿದೆ. ಫಾರ್ಬಿಡನ್ ಸಿಟಿ (ನಿಷೇಧಿತ ನಗರ) ಎನ್ನುವ ಹೆಸರು ಬರಲು ಕಾರಣ ಇಲ್ಲಿ ಪ್ರವೇಶಿಸಲು ಅಥವಾ ಇಲ್ಲಿಂದ ಹೊರಹೋಗಲು ರಾಜನ ಅನುಮತಿ ಅತ್ಯಗತ್ಯವಾಗಿತ್ತು. ಈ ನಗರದಿಂದಲೇ ಕಿನ್ ಹಾಗೂ ಮಿಂಗ್ ರಾಜವಂಶಗಳ 24 ರಾಜರುಗಳು ಆಡಳಿತ ನಡೆಸಿದ್ದರು. ಈ ನಗರದ ನಿರ್ಮಾಣಕ್ಕೆ 14 ವರ್ಷಗಳು ಬೇಕಾಗಿದ್ದವು. ಚೀನಾ ದಂತಕಥೆಗಳ ಪ್ರಕಾರ ಸ್ವರ್ಗದ ಕೇಂದ್ರವಿರುವುದು ಉತ್ತರ ಧ್ರುವದಲ್ಲಿ. ಅದೇ ರೀತಿ ಮುನಷ್ಯರ ಜೀವನದ ಕೇಂದ್ರವಿರುವುದು ಈ ಫಾರ್ಬಿಡನ್ ಸಿಟಿಯಲ್ಲಿ. 1925ರಲ್ಲಿ ಈ ನಗರವನ್ನು ಮ್ಯೂಸಿಯಂ ಆಗಿ ಪರಿವರ್ತಿಸಲಾಯಿತು ಮತ್ತು ಆ ನಂತರವಷ್ಟೇ ಈ ಐತಿಹಾಸಿಕ ನಗರಕ್ಕೆ ಸಾಮಾನ್ಯ ಜನರು ಪ್ರವೇಶಿಸಲು ಸಾಧ್ಯವಾಗಿದ್ದು. ಫಾರ್ಬಿಡನ್ ಸಿಟಿಯು ಇಡೀ ಜಗತ್ತಿಗೆ ಅನೇಕ ವರ್ಷಗಳಿಂದಲೂ ತಿಳಿದಿದೆ. ಆದರೆ ಚೀನಾದ ನೆಲವು ಆಳವಾಗಿ ಹುಗಿಯಲ್ಪಟ್ಟ ಐತಿಹಾಸಿಕ ಪರಂಪರೆಯನ್ನು ಹೊಂದಿದ್ದು, ಅದು ಜಗತ್ತಿಗೆ ಪುನಃ ಕಂಡುಬಂದಿದ್ದು ಸಾವಿರಾರು ವರ್ಷಗಳ ನಂತರ. ಇದನ್ನು ಟೆರ್ರಾಕೋಟಾ ಆರ್ಮಿ ಎನ್ನಲಾಗುತ್ತದೆ. ಸುಮಾರು 8000 ಸೈನಿಕರ ಆಕೃತಿಗಳು ಚೀನಾ ರಾಜವಂಶದ ವಿಶಿಷ್ಟವಾದ ನಿಗೂಢತೆಗಳಲ್ಲಿ ಒಂದೆನ್ನಬಹುದು. ಈ ಟೆರ್ರಾಕೋಟಾ ಆರ್ಮಿಯು ಕಂಡುಬಂದಿದ್ದು ಕ್ರಿ.ಶ. 1974ರಲ್ಲಿ ಒಬ್ಬ ಕುಂಬಾರ ನೀರಿಗಾಗಿ ಬಾವಿಯನ್ನು ತೋಡುತ್ತಿರುವಾಗ. ನಂತರ ಹೆಚ್ಚಿನ ಸಂಶೋಧನೆಗಳನ್ನು ಮಾಡಿದಾಗ ಈ ಸೈನಿಕ ಆಕೃತಿಗಳನ್ನು ಕಿನ್ ರಾಜವಂಶದ ಮೊದಲ ರಾಜನ ಗೋರಿಯ ಹತ್ತಿರ ನಿರ್ಮಿಸಲಾಗಿತ್ತು ಎನ್ನುವುದನ್ನು ಪತ್ತೆ ಮಾಡಲಾಗಿರುತ್ತದೆ. ಈ ಸೇನೆಯು 7 ಲಕ್ಷ ಕಾರ್ಮಿಕರು ಹಾಗೂ ಶಿಲ್ಪಿಗಳ 38 ವರ್ಷಗಳ ಸುದೀರ್ಘ ಶ್ರಮವಾಗಿದೆ. ಈ ಸೇನೆಯ ಕೈಲಿರುವ ಆಯುಧ ಹಾಗೂ ಕವಚಗಳು ನೈಜವಾಗಿವೆ. ಪ್ರತಿ ವರ್ಷ ಕನಿಷ್ಠ 20 ದಶಲಕ್ಷ ಪ್ರವಾಸಿಗಳು ಈ ಟೆರ್ರಾಕೋಟಾ ಆರ್ಮಿಯನ್ನು ಸಂದರ್ಶಿಸುತ್ತಾರೆ.

ಇಂತಹ ಐತಿಹಾಸಿಕ ಶಿಲ್ಪಗಳು ಹಾಗೂ ಸ್ಥಳಗಳ ಜೊತೆಯಲ್ಲಿ ಚೀನಾದಲ್ಲಿ ಅನೇಕ ಹಬ್ಬಗಳೂ ಕೂಡ ಪ್ರವಾಸಿಗಳನ್ನು ಆಕರ್ಷಿಸುತ್ತವೆ. ಈ ಆಕರ್ಷಕ ನೆರೆರಾಷ್ಟ್ರವನ್ನು ವೀಕ್ಷಿಸಲು ಕೇಸರಿಯು ನವೆಂಬರ್‌ನಿಂದ ಅಕ್ಟೋಬರ್‌ವರೆಗೆ ಅನೇಕ ಪ್ರವಾಸಗಳನ್ನು ಆಯೋಜಿಸುತ್ತದೆ. ಇಂತಹ ಪ್ರವಾಸಗಳು ಬೀಜಿಂಗ್, ಕ್ಸಿಯಾಂಗ್, ಗುಲಿನ್ ಮತ್ತು ಶೆನ್‌ಝೆನ್‌ನಂತಹ ರಾಜ್ಯಗಳನ್ನು ಒಳಗೊಂಡಿರುತ್ತವೆ. ಈ ನೆರೆದೇಶದ ನಿಗೂಢತೆಯ ಆಕರ್ಷಣೆಯನ್ನು ನಿಮ್ಮದಾಗಿಸಿಕೊಳ್ಳಿ. ನೀವು ಚೀನಾದ ಜೊತೆಯಲ್ಲಿಯೇ ಜಪಾನ್ ಅನ್ನು ಕೂಡ ವೀಕ್ಷಿಸಲು ಬಯಸಿದಲ್ಲಿ 15 ದಿನಗಳ 'ಜಪಾನ್ ಚೀನಾ' ಪ್ರವಾಸದ ಆಯ್ಕೆಯು ಲಭ್ಯವಿರುತ್ತದೆ. 'ಬೆಸ್ಟ್ ಆಫ್ ಜಪಾನ್' ಮತ್ತು 'ಸ್ಪ್ಲೆಂಡಿಡ್ ಚೀನಾ' ಪ್ರವಾಸದ ಜೊತೆ ನೀವು ಜಪಾನ್ ಹಾಗೂ ಚೀನಾಗಳನ್ನು ಪ್ರತ್ಯೇಕವಾಗಿ ಪ್ರವಾಸ ಮಾಡಬಹುದು. ನಿಮ್ಮ ಬಜೆಟ್ ಕಡಿಮೆಯಿದ್ದರೆ, ಆಗ ನಿಮಗೆ ಕೆ &ಎಸ್‌ನ 7 ದಿನಗಳ 'ಚೀನಾ ಗೇಟ್' ಪ್ರವಾಸವು ಲಭ್ಯವಿರುತ್ತದೆ. ಈ ಪ್ರವಾಸಗಳ ಕುರಿತು ಹೆಚ್ಚಿನ ಮಾಹಿತಿಗೆ ನಮ್ಮ ವೆಬ್‌ಸೈಟ್ www.kesari.co.inಗೆ ಲಾಗ್ ಆನ್ ಮಾಡಿ ಅಥವಾ 1800 22 1100ಗೆ ಕರೆ ಮಾಡಿ.


KESARI
World Class Travel Company

ಈಗ ಎಲ್ಲವೂ ದುಬಾರಿ...
ಆದರೆ ಪ್ರವಾಸ ಮಾತ್ರ ಅಗ್ಗ!

ವಿದೇಶ ಪ್ರವಾಸ @ 29990
ದೇಶಿ ಪ್ರವಾಸ @ 12975




ಪ್ರವಾಸ ಮಾಡುತ್ತಿರಿ!
ಮೊದಲು ದೇಶ ನಂತರ ವಿದೇಶ

ಭಾರೀ ರಿಯಾಯ್ತಿಯ ಕಾಸ್ಟ್ ಸೇವರ್ ಪ್ರವಾಸಗಳು

| | | | |
|---|---|---|---|
| 37990 ~~42990~~ QT-ಥೈಲ್ಯಾಂಡ್ 5 ದಿನಗಳು | 68990 ~~75990~~ Q8-ಸಿಂಗಪುರ್ ಮಲೇಷಿಯಾ -6 ದಿನಗಳು | 74990 ~~89990~~ Q3-ಸಿಂಗಪುರ್ ಥೈಲ್ಯಾಂಡ್ ಮಲೇಷಿಯಾ -8 ದಿನಗಳು | 79990 ~~96990~~ Q2-ಸಿಂಗಪುರ್ ಥೈಲ್ಯಾಂಡ್ ಮಲೇಷಿಯಾ -10 ದಿನಗಳು |
| 44990 ~~49990~~ MK-ಶ್ರೀಲಂಕಾ 6 ದಿನಗಳು | 37990 ~~44990~~ QA-ಥೈಲ್ಯಾಂಡ್ 6 ದಿನಗಳು | 71990 ~~78990~~ ML-ಶ್ರೀಲಂಕಾ ಮಾಲ್ಡಿವ್ಸ್–7 ದಿನಗಳು | 100990 ~~108990~~ JB-ಚೀನಾ ಗೇಟ್ 7 ದಿನಗಳು-ಅಕ್ಟೋಬರ್ 8 |
| 18975 ~~21975~~ N6-ನೈನಿತಾಲ್ ಮಸ್ಸೂರಿ ಕಾರ್ಬೆಟ್–8 ದಿನಗಳು | 14975 ~~21975~~ K6-ಕಾಶ್ಮೀರ್ ವೈಷ್ಣೋದೇವಿ–7 ದಿನಗಳು | 14975 ~~20975~~ S6-ಕೇರಳ ಕನ್ಯಾಕುಮಾರಿ–7 ದಿನಗಳು | 12975 ~~18975~~ R6-ರಾಜಸ್ಥಾನ ಮೇವಾಡ–7 ದಿನಗಳು |

*T&C apply

Bengaluru 4128 2222 • www.kesari.in • sales@kesari.in • Toll free 1800 22 1100